**ದಿಃ 22.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ : ಶ್ರೀ. ಹಿ.ಸ.ಸ.ಅ.ರವರಿಂದ:**

ಸಿಸಿನಂ.810/2016 ಕೇಸಿ ಆದೇಶದ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು (ಪುಟ ಸಂಖ್ಯೇ.01 ರಿಂದ 9), ಅದನ್ನು ನಿ ಪಿ.6 ಎಂದು, ಸಾಕ್ಷಿಯು ದೃಡೀಕೃತ ಸಿಟಿ ಬ್ಯಾಂಕಿನ ಚೆಕ್ಕು ಮತ್ತು ಬ್ಯಾಂಕ್ ಹಿಂಬರಹಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.7 ಎಂದು, ಸಿ.ಸಿ. ನಂ.810/2016 ಕೇಸಿಗೆ ಸಂಬಂದಪಟ್ಟ ದೃಡೀಕೃತ ಲೀಗಲ್ ನೋಟಿಸ್, ಅಂಚೆ ರಸೀದಿ, ಜಾರಿಯಾಗದೇ ವಾಪಸ್ ಬಂದಿರುವ ಅಂಚೆ ಲಕೋಟೆ ಹಾಗೂ ಇತರೆ ದಾಖಲಾತಿಗಳನ್ನು ಪುಟಸಂಖ್ಯೇ.14 ರಿಂದ 177 ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.8 ಎಂದು ಗುರುತಿಸಲಾಯಿತು.

2. 2017 ರಂದು ಪೊಲೀಸರು ಕೆ.ಆರ್.ಪುರಂ ನಲ್ಲಿರುವ ಒಂದನೇ ಆರೋಪಿಯ ಮನೆಯ ಹತ್ತಿರ ಬಂದು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಪೊಲೀಸರಿಗೆ ಸ್ಥಳವನ್ನು ನಾನು ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ ಚಾಸಾ-5, 6 ಮತ್ತ 7 ರವರು ಹಾಜರಿದ್ದರು. ಮಹಜರ್ ನ ಮಾಡಿದ ಸಮಯ ಈಗ ನೆನಪಿಲ್ಲ. ಮಹಜರ್ ಮಾಡಿದಾಗ ನಾನು ಮತ್ತು ಪಂಚರು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇವೆ. ಸಾಕ್ಷಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ.9 ಎಂದು, ಸಾಕ್ಷಿ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಈ ಪ್ರಕರಣದ ಸಂಬಂಧ ನನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎರಡನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಶ್ರೀ.ಕೆ.ಎಂ.ಎಂ. ಎರಡನೇ ಆರೋಪಿ ಪರ ವಕೀಲರಿಂದಃ**

ಎರಡನೇ ಆರೋಪಿಯು ನನ್ನ ಮೇಲೆ ಚೆಕ್ ಬೌನ್ಸ್ ಕೇಸು ದಾಖಲು ಮಾಡಿದ ವಿಚಾರ ಲೀಗಲ್ ನೋಟಿಸ್ ಬಂದ ನಂತರ ಗೊತ್ತಾಗಿರುತ್ತದೆ. ಎರಡನೇ ಆರೋಪಿಯು ನನಗೆ ಲೀಗಲ್ ನೋಟಿಸ್ ಕಳುಹಿಸಿದ ಪೂರ್ವದಲ್ಲಿ ನನಗೆ ಪರಿಚಯವಿರಲಿಲ್ಲ. ನಾನು ಮತ್ತು ನನ್ನ ಗಂಡ ಅಂದರೆ ಒಂದನೇ ಆರೋಪಿಯಾಗಿದ್ದ ರಾಘವಂಕ ರವರು ಎರಡನೇ ಆರೋಪಿಯ ಮನೆಗೆ ನೇರವಾಗಿ ಹೋಗಿ ರೂ.9,80,000/- ನಗದು ಹಣವನ್ನು ಪಡೆದುಕೊಂಡು ಸದರಿ ಹಣದ ಭದ್ರತೆಗಾಗಿ ನಾನು ಮತ್ತು ನನ್ನ

ಗಂಡ ಅಂದರೆ ಒಂದನೇ ಆರೋಪಿಗೆ ಎರಡನೇ ಆರೋಪಿಗೆ ಚೆಕ್ಕನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಎರಡನೇ ಆರೋಪಿಯ ಮಗಳು ಮತ್ತು ನಾನು ಇಬ್ಬರು ಸಹ ಸಹಪಾಠಿಗಳು ಮತ್ತು ಎರಡನೇ ಆರೋಪಿ ಮತ್ತು ಅವರ ಮಗಳು ಆಗಾಗ ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಅಂದರೆ ಒಂದನೇ ಆರೋಪಿ ವಾಸ ಮಾಡುತ್ತಿದ್ದ ಮನೆಗೆ ಎರಡನೇ ಆರೋಪಿ ಮತ್ತು ಅವರ ಹೆಂಡತಿ ಬಂದಿದ್ದರು ಎಂದರೆ ಸರಿಯಲ್ಲ. ಎರಡನೇ ಆರೋಪಿಯು ನನಗೆ ನೋಟಿಸ್ ಕಳುಹಿಸಿದ ಸಂದರ್ಭದಲ್ಲಿ ನಾನು ನನ್ನ ತಾಯಿಯ ಮನೆಯಲ್ಲಿ ವಾಸ ಮಾಡುತ್ತಿದ್ದೆ. ಸಾಕ್ಷಿ ಮುಂದುವರೆದು ಎರಡನೇ ಆರೋಪಿಯು ಲೀಗಲ್ ನೋಟಿಸ್ ನ್ನು ನನ್ನ ತಾಯಿಯ ಮನೆಗೆ ಕಳುಹಿಸಿದ್ದರು ಎಂದು ಹೇಳುತ್ತಾರೆ. ಸದರಿ ನೋಟಿಸ್ ಬಂದಾಗ ನಾನು ನನ್ನ ತಾಯಿಯ ಮನೆಗೆ ಹೆರಿಗೆ ಹೋಗಿದ್ದೆ ಎಂದರೆ ಸರಿ. ನಾನು ಸಲ್ಲಿಸಿರುವ ನನ್ನ ಖಾಸಗಿ ದೂರಿನಲ್ಲಿನ ಎಲ್ಲಾ ಖಂಡಿಕೆಗಳಲ್ಲಿಯೂ ಒಂದನೇ ಆರೋಪಿಯು ನನಗೆ ಕಿರುಕುಳ ಕೊಡುತ್ತಿದ್ದರು ಮತ್ತು ಅವರ ಕುಟುಂಬಕ್ಕೆ ಸಂಬಂದಪಟ್ಟ ಸಾಲವನ್ನು ನಾನು ತೀರಿಸಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದನೇ ಆರೋಪಿಯು ನನ್ನ ಹೆಸರಿನಲ್ಲಿ ಸಾಲ ಮಾಡಿದ್ದರಿಂದ ನನ್ನ ವೇತನ ಖಾತೆಯಿಂದ ಆ ಸಾಲವನ್ನು ನಾನು ಜಮಾ ಮಾಡುತ್ತಿದ್ದೆ ಎಂದು ಹೇಳುತ್ತಾರೆ.

2. ಫೋರ್ಜರಿ ಮಾಡಿರುವ ಚೆಕ್ಕನ್ನು ನನ್ನ ಗಂಡನಾದ ಒಂದನೇ ಆರೋಪಿಯು ಎರಡನೇ ಆರೋಪಿಗೆ ನೀಡಿರುತ್ತಾನೆ. ನನ್ನ ಗಂಡ ಎರಡನೇ ಆರೋಪಿಗೆ ನನ್ನ ಚೆಕ್ಕನ್ನು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ನೀಡಿರುವುದಿಲ್ಲ. ನೋಟಿಸ್ ಬಂದ ನಂತರ ನಾನು ನನ್ನ ಗಂಡನನ್ನು ವಿಚಾರಣೆ ಮಾಡಿರುತ್ತೇನೆ. ಆಗ ನನ್ನ ಗಂಡನು ಆ ಚೆಕ್ಕಿಗೂ ನನಗೂ ಸಂಬಂಧವಿಲ್ಲ, ಸದರಿ ಚೆಕ್ಕಿನ ಸಂಬಂಧ ನೀವು ಬಗೆಹರಿಸಿಕೊ ಎಂದು ನನ್ನ ಗಂಡ ಹೇಳಿರುತ್ತಾನೆ. ನನ್ನ ಗಂಡನ ಮನೆಯಲ್ಲಿ ಚೆಕ್ಕಿಗೆ ಸಹಿ ಮಾಡಿರಲಿಲ್ಲ. ಸದರಿ ಚೆಕ್ಕಿಗೆ ಸಂಬಂದಪಟ್ಟಂತೆ ಖಾತೆಯು ಸಹ ಮುಕ್ತಾಯವಾಗಿತ್ತು. ಮೆಡಿಯೇಷನ್ ಸೆಂಟರ್ ನಲ್ಲಿ ಈ ಪ್ರಕರಣದಲ್ಲಿರುವ ನಾನು ನೀಡಿರುವ ವಿವಾದಿತ ಚೆಕ್ಕಿಗೆ ಸಂಬಂದಪಟ್ಟಂತಹ ಪ್ರಕರಣವನ್ನು ನಾನು ಇತ್ಯರ್ಥ ಮಾಡಿಕೊಳ್ಳುತ್ತೇನೆ ಎಂದು ನನ್ನ ಗಂಡ ಹೇಳಿರುತ್ತಾನೆ ಎಂದರೆ ಸರಿ. ಚೆಕ್ಕಿಗೆ ಸಂಬಂಪಟ್ಟಂತೆ

ಬಂಗಾರ ಪೇಟೆ ನ್ಯಾಯಾಲಯದಲ್ಲಿ ಸಿಸಿನಂ.810/2016 ರ ಕೇಸು ವಜಾ ಗೊಡಿರುತ್ತದೆ. ಆ ಸಂಬಂಧ ಎರಡನೇ ಆರೋಪಿಯ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದ ಎಂದರೆ ಸರಿ. ಸದರಿ ಮೇಲ್ಮನವಿ ಕೇಸಿನಲ್ಲಿ ನನಗೆ ನೋಟಿಸ್ ಬಂದಿದ್ದು, ನಾನು ವಕೀಲರನ್ನು ಸಹ ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ಸಂಖ್ಯೇಃ 913/2022 ಆಗಿತ್ತು ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ದಿ.18.01.2023 ರಂದು ಸದರಿ ಮೇಲ್ಮನವಿಯನ್ನು ನಾನು ಮತ್ತು ಎರಡನೇ ಆರೋಪಿಯು ಇತ್ಯರ್ಥ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ಚೆಕ್ಕಿನಲ್ಲಿ ಫೋರ್ಜರಿ ಮಾಡಿದ್ದು ಆ ಸಂಬಂಧ ಚೆಕ್ಕು ಮತ್ತು ನನ್ನ ಸಹಿಯನ್ನು ಪೊಲೀಸರು ಕೈ ಬರಹ ತಜ್ಞರಿಗೆ ಕಳುಹಿಸಿದ್ದರು ಎಂದರೆ ಸರಿ. ನಾನು ಬ್ಯಾಂಕಿನಲ್ಲಿ ಮಾಡಿರುವ ಸ್ಪೆಸಿಮನ್ ಸಹಿಯನ್ನು ಮತ್ತು ಚೆಕ್ಕಿನಲ್ಲಿ ಮಾಡಿರುವ ಸಹಿಯನ್ನು ಟ್ರೂಥ್ ಲಾಬ್ ಗೆ ಕಳುಹಿಸಿಲ್ಲ.

3. ಮಹಜರ್ ಗೆ ಸಹಿಯನ್ನು ನಾನು ಒಂದನೇ ಆರೋಪಿಯ ಮನೆಯಲ್ಲಿ ಮಾಡಿರುತ್ತೇನೆ. ಮಹಜರ್ ನ್ನು ಬೆಳಿಗ್ಗೆ ಸಮಯದಲ್ಲಿ ಮಾಡಿರುತ್ತಾರೆ. ನನ್ನ ಮತ್ತು ನನ್ನ ಗಂಡನ ನಡುವಿನ ಕೌಟುಂಬಿಕ ವಿವಾದದಿಂದ ನಾನು ಮತ್ತು ನನ್ನ ಗಂಡ ಎರಡನೇ ಆರೋಪಿಗೆ ಕೊಡಬೇಕಾಗಿದ್ದ ಹಣಕ್ಕಾಗಿ ಎರಡನೇ ಆರೋಪಿಯ ವಿರುದ್ದ ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸನ್ನು ನಾನು ಎರಡನೇ ಆರೋಪಿಯ ವಿರುದ್ದ ನನ್ನ ಗಂಡನ ವಿರುದ್ದ ವಿವಾಹ ವಿಚ್ಛೇದನ ಅರ್ಜಿಯನ್ನು ಸಲ್ಲಿಸಿದ ನಂತರ ದಾಖಲು ಮಾಡಿದ್ದೇನು.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**